<u>2 ನೇ ಆಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬಳ್ಳಾರಿ</u>

<u>ಸತ್ರ ಮೊಕದ್ದಮೆ ಸಂಖ್ಯೆ: 51/2023</u>

ಪಿ.ಡಬ್ಲುಃ 3 ಸಿಡಬ್ಲುಃ 9

ಸಾಕ್ಷಿಯ ಹೆಸರು : ಕೊಟ್ರೇಶ್ ನಾಯ್ಕ

ತಂದೆ ಹೆಸರು : ಕೀರ್ಯಾನಾಯ್ಕ

ವಯಸ್ಸು : 44 ವರ್ಷ

ವೃತ್ತಿ : ಹೆಚ್ ಸಿ 326

ವಾಸಸ್ಥಳ : ಮನೆ ನಂ. 12, ಜಿ ಬ್ಲಾಕ್ , ಡಿಎ ಆರ್ ಪೊಲೀಸ್ ಕ್ವಾರ್ಟರ್ಸ್, ಬಳ್ಳಾರಿ

ಸತ್ಯ ಪ್ರತಿಜ್ಞೆ ಮಾಡಿದ ದಿನಾಂಕಃ 12-09-2023

ಮುಖ್ಯ ವಿಚಾರಣೆ ಮಾನ್ಯ ಸಾರ್ವಜನಿಕ ಅಭಿಯೋಜಕರಿಂದಃ-

ಚಾಸಾ-10 ನನ್ನ ಹೆಂಡತಿ. ಮೃತ ಜಾಫರ್ ಸಾಬ್ ನನಗೆ ಪರಿಚಯ. ಸದರಿ ಮೃತನು ನಮ್ಮ ಮನೆಯ ಪಕ್ಕದ ಮನೆಯಲ್ಲಿ ವಾಸವಾಗಿದ್ದು , ಆತನು ಡಿ ಎ ಆರ್ ನಲ್ಲಿ ಪೊಲೀಸ್ ಆಗಿದ್ದನು. ಚಾಸಾ-2 ರವರು ಮೃತನ ಹೆಂಡತಿ ಎಂದು ಮೃತನು ಹೇಳುತ್ತಿದ್ದನು. ಆರೋಪಿಯೂ ಮೃತನ ಜೊತೆ ಅವನ ಮನೆಯಲ್ಲಿ ವಾಸವಾಗಿದ್ದಳು. ಅವರಿಬ್ಬರು ಗಂಡ ಹೆಂಡತಿ ಎನ್ನುವ ರೀತಿಯಲ್ಲಿ ವಾಸವಾಗಿದ್ದರು. ಮೃತನ ಸ್ವಂತ ಊರು ಚಿನ್ನಾಪುರ . ಮೃತನ ಮೊದಲನೆ ಹೆಂಡತಿ ಚಿನ್ನಾಪುರದಲ್ಲಿ ವಾಸವಾಗಿದ್ದಳು. ಮೃತನು ಹನುಮಕ್ಕಳ ಜೊತೆ ಸಂಬಂದ ಇಟ್ಟುಕೊಂಡ ಕಾರಣ ಚಾಸಾ-2 ರವರು ಚಿನ್ನಾಪುರದಲ್ಲಿ ವಾಸವಾಗಿದ್ದಳು. ಸದರಿ ಮೃತನ ಕ್ವಾರ್ಟರ್ಸ್‌ನಲ್ಲಿ ಮೃತನು, ಆರೋಪಿ ಮತ್ತು ಅವರಿಬ್ಬರ ಮಗ ನಿಖಿಲ್ ಇರುತ್ತಿದ್ದರು. ಮೃತನು ಸಾಯುವ 6 ತಿಂಗಳ ಮೊದಲು ಸದರಿ ಕ್ವಾರ್ಟರ್ಸ್ ನಲ್ಲಿ ವಾಸವಾಗಿದ್ದನು.

ದಿಃ 22-03-2023 ರಂದು ರಾಃ 9-00 ಗಂಟೆಗೆ ನಾನು ನನ್ನ ಹೆಂಡತಿ ಮನೆಯಲ್ಲಿರುವಾಗ ಆರೋಪಿಯೂ ನನ್ನನ್ನು ಕೊಟ್ರೇಶ್ಣ್ಣ , ಕೊಟ್ರೆಶಣ್ಣ ಎಂದು

ಜೋರಾಗಿ ಕೂಗಿದಾಗ ನಾವು ಹೊರಗೆ ಓಡಿ ಹೋಗಿರುತ್ತೇವೆ. ಏನಾಗಿರುತ್ತದೆ ಎಂದು ಆರೋಪಿಯ ಮನೆಗೆ ಹೋಗಿ ಕೇಳಲಾಗಿ ಅವಳ ಗಂಡನನ್ನು ಯಾರೋ ಹೊಡೆದು ಹೋಗಿರುತ್ತಾರೆ ಎಂದು ಹೇಳಿದಳು . ಸದರಿ ಮನೆಯೊಳಗೆ ಹೋಗಿ ನೋಡಲಾಗಿ ಹಾಲ್ ನಲ್ಲಿ ಜಾಫರ್ ಸಾಬ್ ನು ಬಾಗಿಲ ಹತ್ತಿರ ಮಲಗಿಕೊಂಡಿದ್ದು ಆತನ ಬಲಭಾಗದ ತಲೆಗೆ, ಕಿವಿಯ ಹತ್ತಿರ ರಕ್ತಗಾಯವಾಗಿತ್ತು. ಸದರಿ ಸ್ಥಳದಲ್ಲಿ ಒಂದು ಕೌದಿ , ಬೆಡ್ ಶೀಟ್ , ತಲೆದಿಂಬ್ ಮತ್ತು ಟವಲ್ ಇತ್ತು. ಮೃತನ ರೆಡ್ ಮೀ ಮೊಬೈಲ್ ಇತ್ತು . ನಂತರ ನಾವು **108** ಗೆ ಪೋನ್ ಮಾಡಲಾಗಿ **112** ವಾಹನದವರು ಸಹ ಅಲ್ಲಿಗೆ ಬಂದರು. ಸದರಿ ವಾಹನದಲ್ಲಿ ಮುಖ್ಯ ಪೇದೆ ರವಿಕುಮಾರ್ ಬಂದಿದ್ದನು. ಆತನನ್ನು ಆಸ್ಪತ್ರೆಗೆ ತೆಗೆದುಕೊಂಡು ಹೋದರು. ನಮ್ಮಲ್ಲಿ ವಾಸವಾಗಿರುವ ಸಿಬ್ಬಂದಿಯ ಮಗ **112** ಕ್ಕೆ ಅರ್ಧ ಗಂಟೆಯ ನಂತರ ಪೋನ್ ಮಾಡಲಾಗಿ ಜಾಫರ್ ಸಾಬ್‌ನು ಮರಣ ಹೊಂದಿರುತ್ತಾನೆ ಎಂದು ಗೊತ್ತಾಯಿತು.

ನಾನು ಕೆಳಗೆ ಹೋಗಿ ನೋಡಲಾಗಿ ಅಲ್ಲೆ ಕ್ವಾರ್ಟಸ್ ನಲ್ಲಿ ವಾಸ ಮಾಡುತ್ತಿರುವ ಪುಷ್ಪಲತಾ ಮತ್ತು ಹೇಮಲತಾ ಇವರು ಆರೋಪಿಯೂ ಕಸ ಹಾಕುವ ಕಾಂಪೋಂಡ್ ಕಡೆ ಏನೋ ಹಾಕಿರಬಹುದು ಹೋಗಿ ನೋಡಿರಿ ಎಂದು ಹೇಳಿದರು. ನಂತರ ನಾವು ಹೋಗಿ ನೋಡಲಾಗಿ ಕಬ್ಬಿಣದ ಹಾರೆಯನ್ನು ಬಿಸಾಕಿದ್ದು ಸಿಕ್ಕಿರುತ್ತದೆ. ಮಾರನೆಯ ದಿನ ಬೆಃ **9-00** ಗಂಟೆಗೆ ಚಾಸಾ-**48** ರವರು ಪಂಚನಾಮೆ ಮಾಡಿದ್ದು , ಸದರಿ ಸ್ಥಳದಲ್ಲಿ ಟವಲ್, ಒಂದು ಕೌದಿ , ಒಂದು ಬೆಡ್ ಶೀಟ್ , ಒಂದು ತಲೆದಿಂಬು, ರೆಡ್ ಮೀ ಮೊಬೈಲ್ , ಕಿತ್ತು ಬಿಸಾಕಿದ ತಾಳಿ , ಆರೋಪಿಯ ಪ್ಲಾಸ್ಟಿಕ್ ಚಪ್ಪಲಿ ಹಾಗೂ ಎಫ್ ಎಸ್ ಎಲ್ ಅಧಿಕಾರಿ ರಾಘವೇಂದ್ರ ರವರು ಬಂದು ಸ್ಥಳದಲ್ಲಿ ಬಿದ್ದಿರುವ ರಕ್ತದ ಕಲೆಗಳನ್ನು ಮತ್ತು ಗೋಡೆಯ ಮೇಲೆ ಇದ್ದ ರಕ್ತದ ಕಲೆಗಳನ್ನು ತೆಗೆದುಕೊಂಡಿರುತ್ತಾರೆ. ಸದರಿ ವಸ್ತು ಗಳನ್ನು ಬೆಃ **9-00** ಗಂಟೆಯಿಂದ **10-30** ಗಂಟೆವರೆಗೆ ಚಾಸಾ-**22** ಮತ್ತು **23** ರವರ ಸಮಕ್ಷಮ ಪಂಚನಾಮೆ ಮಾಡಿ ಜಪ್ತಿಗೊಳಿಸಿರುತ್ತಾರೆ. ನಾನು ರಾತ್ರಿ ಸಮಯದಲ್ಲಿ ಹನುಮಕ್ಕ ಕರೆದಾಗ ಜಾಫರ್

ಸಾಬ್ ಮಲಗಿದ್ದ ಜಾಗೆಯ ವೀಡಿಯೋವನ್ನು ಮಾಡಿದ್ದು ಅದನ್ನು ತನಿಖಾಧಿಕಾರಿಯವರಿಗೆ ಕೊಟ್ಟಿರುತ್ತೇನೆ. ಸದರಿ ವೀಡಿಯೋ ಕ್ಲಿಪನ್ನು ಸಿಡಿ ಮಾಡಿಸಿ ಚಾಸಾ-36 ರವರ ಮುಖಾಂತರ ಕೊಟ್ಟಿರುತ್ತೇನೆ. ಸಾಕ್ಷಿಗೆ ಘಟನಾ ಸ್ಥಳದ ಪಂಚನಾಮೆಯನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಪಂಚನಾಮೆಯನ್ನು ನಿಪಿ-2 ಎಂದು, ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಜಪ್ತಿಗೊಳಿಸಿದ ವಸ್ತುಗಳನ್ನು ಪ್ರತ್ಯೇಕವಾಗಿ ಬಿಳಿ ಬಟ್ಟೆಯಲ್ಲಿ ಹಾಕಿ ಹೊಲೆದು ಸೀಲ್ ಮಾಡಿ ಜಪ್ತಿಗೊಳಿಸಿರುತ್ತಾರೆ. ಜಪ್ತಿಗೊಳಿಸಿದ ವಸ್ತು ಗಳನ್ನು ನೋಡಿದರೆ ಗುರುತಿಸುತ್ತೇನೆ.

( ಈ ಹಂತದಲ್ಲಿ ನ್ಯಾಯಾಲಯದ ಮುಂದೆ ಇರುವ ಬಿಳಿ ಬಟ್ಟೆಯಲ್ಲಿ ಹೊಲೆದು ಸೀಲ್ ಮಾಡಲಾಗಿರುವ ವಸ್ತುಗಳನ್ನು ತೆರೆಯಲು ಪ್ರಾಜ್ಞ ಸಾರ್ವಜನಿಕ ಅಭಿಯೋಜಕರು ಅನುಮತಿ ಕೋರಿದ ಮೇರೆಗೆ ಅನುಮತಿ ನೀಡಲಾಯಿತು ).

ಸಾಕ್ಷಿಗೆ ಕೌದಿಯನ್ನು , ಬೆಡ್ ಶೀಟ್ ನ್ನು ಕಟ್ ಮಾಡಿದ ಸ್ಯಾಂಪಲ್ ಪೀಸ್ , ತಲೆ ದಿಂಬಿನ ಸ್ಯಾಂಪಲ್ ಪೀಸ್, ಬೆಡ್ ಶೀಟ್, ಟವಲ್ , ರೆಡ್ ಮೀ ಪೋನ್ , ರಕ್ತ ಸಂಗ್ರಹಿಸಿದ ಸ್ವಾಬ್ , ಕರಿಮಣಿ ಸರ, ಆರೋಪಿಯ ಒಂದು ಜೊತೆ ಚಪ್ಪಲಿಗಳನ್ನು ನೋಡಿ ಗುರುತಿಸಿದ್ದು ಅವುಗಳನ್ನು ಕ್ರಮವಾಗಿ ಮು .ಮಾ-3 ರಿಂದ 12 ಎಂದು ಗುರುತಿಸಲಾಯಿತು. ತಾನು ಕೊಟ್ಟ ವೀಡಿಯೋ ಕ್ಲಿಪ್ಪಿಂಗ್ ಗಳ ಸಿಡಿಯನ್ನು ಸಾಕ್ಷಿಯೂ ನೋಡಿ ಗುರುತಿಸಿದ್ದು ಅದನ್ನು ನಿಪಿ-3 ಎಂದು ಗುರುತಿಸಲಾಯಿತು. ನಿಪಿ-2 ರ ಕಾಲಕ್ಕೆ ತೆಗೆದ ಭಾವ ಚಿತ್ರ ಗಳನ್ನು ಸಾಕ್ಷಿಯೂ ನೋಡಿ ಗುರುತಿಸಿದ್ದು ಅವುಗಳನ್ನು ನಿಪಿ-4 ರಿಂದ 14 ಎಂದು ಗುರುತಿಸಲಾಯಿತು. ಜಾಪರ್ ಸಾಬ್ ಯಾರು ಹೊಡೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ ಆದರೆ ಆತನಿಗೆ ಹನುಮಕ್ಕ ಹೊಡೆದಿರುತ್ತಾಳೆ ಎಂದು ಅನುಮಾನವಿರುತ್ತದೆ. ಈ ಬಗ್ಗೆ ತನಿಖಾಧಿಕಾರಿಯವರು ನನ್ನನ್ನು ವಿಚಾರಣೆ ಮಾಡಿ ದಿಃ 23-03-2023 ರಂದು ಹೇಳಿಕೆ

ಪಡೆದಿರುತ್ತಾರೆ. ನ್ಯಾಯಾಲಯದಲ್ಲಿ ಹಾಜರುಪಡಿಸಿದ ಆರೋಪಿಯನ್ನು ನೋಡಿ ಸಾಕ್ಷಿ ಗುರುತಿಸಿರುತ್ತಾರೆ.

ಮೃತ ಜಾಫರ್ ಸಾಬ್ ನು ತನ್ನ ಹೆಂಡತಿ ಚಾಸಾ-2 ರವರ ಹತ್ತಿರ ಹೋಗಿ ಬರುತ್ತಾನೆ ಎಂದು ಸಾಯುವ 20 ದಿನಗಳ ಮೊದಲಿನಿಂದ ಜಗಳ ಮಾಡುತ್ತಿದ್ದರು. ಸದರಿ ಇಬ್ಬರು ಗಲಾಟೆ ಮಾಡುವುದರಿಂದ ನನಗೆ ಗೊತ್ತಾಯಿತು ಹಾಗೂ ಜಾಫರ್ ಸಾಬ್ ನು ನನಗೆ ಹೇಳಿದ್ದನು.

<u>ಪಾಟೀಸವಾಲು ಆರೋಪಿ ಪರವಾಗಿ ಶ್ರೀ ಹೆಚ್ ಎ ಆರ್ ವಕೀಲರಿಂದಃ</u>

ಪಂಚನಾಮೆಗೆ ಹಾಜರಾಗುವಂತೆ ಚಾಸಾ-48 ರವರು ನನಗೆ ಲಿಖಿತ ನೋಟಿಸ್ ಕೊಟ್ಟಿರುವುದಿಲ್ಲ. ಪುಷ್ಪಲತಾ ಮತ್ತು ಹೇಮಲತಾ ಅವರು ಹನುಮಕ್ಕ ಕಾಂಪೋಂಡ್ ಬಳಿ ಕಸ ಹಾಕುವ ಜಾಗದಲ್ಲಿ ಏನೋ ಹಾಕಿರಬಹುದು ಎಂದು ನಮಗೆ ಹೋಗಿ ನೋಡಲು ಹೇಳಿದ್ದಳು ಎನ್ನುವ ಅಂಶವನ್ನು ಮೊದಲ ಬಾರಿಗೆ ನ್ಯಾಯಾಲಯದಲ್ಲಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ರೈಲ್ವೆ ಹಳಿಯ ಪಕ್ಕದಲ್ಲಿ ಕಾಂಪೋಂಡ್ ಸುಃ 7-8 ಅಡಿ ಎತ್ತರ ಇರುತ್ತದೆ ಎಂದರೆ 7 ಅಡಿ ಎತ್ತರ ಇರುತ್ತದೆ. ಕಸ ಹಾಕುವ ಸ್ಥಳ ರಾತ್ರಿ ಸಮಯದಲ್ಲಿ ವಿದ್ಯುತ್ ಲೈಟ್ ಗಳು ಇಲ್ಲದೆ ಇರುವುದರಿಂದ ಬಹಳ ಕತ್ತಲಾಗಿರುತ್ತದೆ ಎಂದರೆ ಸರಿಯಲ್ಲ. ಸದರಿ ಕಸ ಹಾಕುವ ಜಾಗದಲ್ಲಿ ನಾನು ಸಹ ಹೋಗಿ ನೋಡಿರುತ್ತೇನೆ. ನಾನು ಕಸ ಹಾಕುವ ಸ್ಥಳದಲ್ಲಿ ಹೋಗಿ ನೋಡಿ ಬಂದಿರುತ್ತೇನೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಡಿ ಎ ಆರ್ ಕ್ವಾರ್ಟರ್ಸ್ ನಲ್ಲಿ ಶಿಸ್ತು ಸಮಿತಿ ರಚನೆ ಮಾಡಿರುತ್ತಾರೆ ಎಂದರೆ ಸರಿ . ಸದರಿ ಸಮಿತಿಯೂ ಗಲಾಟೆಗಳು ಆಗುತ್ತಿದ್ದರೆ ವಿಚಾರಣೆ ಮಾಡುತ್ತಾರೆ ಎಂದರೆ ನಾವು ಯಾರಾದರೂ ಸಮಿಯ ಮುಂದೆ ಮಾಹಿತಿ ಕೊಟ್ಟರೆ ಮಾತ್ರ ವಿಚಾರಣೆ ಮಾಡುತ್ತಾರೆ.

ಸಾಮಾನ್ಯವಾಗಿ ಗಂಡ ಹೆಂಡತಿಯ ಮಧ್ಯದಲ್ಲಿ ಸಂಸಾರದ ವಿಷಯವಾಗಿ ಜಗಳವಾಗುವುದು ಸಾಮಾನ್ಯ ಎಂದರೆ ಸರಿ . ಹನುಮಕ್ಕ ಮತ್ತು ಜಾಫರ್ ಸಾಬ್ ರವರನ್ನು ಶಿಸ್ತು ಸಮಿತಿಯವರು ವಿಚಾರಣೆ ಮಾಡಿಲ್ಲ ಎಂದರೆ ನಾವು ಯಾರು ದೂರು ಕೊಟ್ಟಿರುವುದಿಲ್ಲ .

ಆರೋಪಿ ಮತ್ತು ಜಾಫರ್ ಸಾಬ್ ಮಧ್ಯದಲ್ಲಿ ಯಾವುದೇ ಜಗಳವಾಗುತ್ತಿರಲಿಲ್ಲ , ಸದರಿ ಜಗಳವಾಗುತ್ತಿತ್ತು ಎಂದು ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ . ಆರೋಪಿ ಮತ್ತು ಜಾಫರ್ ಸಾಬ್ ಮಧ್ಯದಲ್ಲಿ ಯಾವುದೇ ಜಗಳವಾಗಿಲ್ಲ ಆ ಕಾರಣ ನಾವು ಶಿಸ್ತು ಸಮಿತಿಗೆ ದೂರು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಜಾಫರ್ ಸಾಬ್ ಮನೆ ಕೆಳಗೆ ನಮ್ಮ ಮನೆ ಮೇಲೆ ಇರುತ್ತದೆ ಎಂದರೆ ಸರಿಯಲ್ಲ, ಅಕ್ಕ ಪಕ್ಕದಲ್ಲಿ ಇರುತ್ತದೆ. ಆರೋಪಿಯೂ ಜಾಫರ್ ಸಾಬ್ ನನ್ನು ಕೊಲೆ ಮಾಡಿರಬಹುದು ಎಂಬ ಅನುಮಾನವನ್ನು ಘಟನೆಯ ಮಾರನೆಯ ದಿನ ನಾನು ತನಿಖಾಧಿಕಾರಿಯವರಿಗೆ ಹೇಳಿ ಬರೆಸಿರುವುದಿಲ್ಲ.

ದಿಃ **23-03-2023** ರಂದು ತನಿಖಾಧಿಕಾರಿಯವರು ನನ್ನ ಹೇಳಿಕೆ ಮಾಡಿಲ್ಲ ಎಂದರೆ ಸರಿಯಲ್ಲ. ಸದರಿ ದಿನ ಹೇಳಿಕೆ ಮಾಡಿರುತ್ತಾರೆ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-**3** ರಿಂದ **14** ರ ಮೇಲೆ ನನ್ನ ಸಹಿ ಇಲ್ಲ ಎಂದರೆ ಸರಿ . ತನಿಖಾಧಿಕಾರಿಯೂ ನನ್ನ ಮೊಬೈಲ್‌ನಿಂದ ದೃಶ್ಯಾವಳಿಗಳನ್ನು ಸಿಡಿ ಮಾಡಿದ ಬಗ್ಗೆ ಯಾವುದೇ ಕ್ರಮ ಜರುಗಿಸಿಲ್ಲ ಎಂದರೆ ಸರಿಯಲ್ಲ. ಸದರಿ ದೃಶ್ಯಾವಳಿಗಳನ್ನು ಯಾವ ದಿನ ಮತ್ತು ಯಾವ ಉಪಕರಣಗಳಿಂದ ಡೌನ್ ಲೋಡ್ ಮಾಡಿಕೊಂಡಿರುತ್ತಾರೆ ಎಂದರೆ ದಿಃ **24-03-2023** ರಂದು ಡೌನ್ ಲೋಡ್ ಮಾಡಿಕೊಂಡಿರುತ್ತಾರೆ.

ಜಾಫರ್ ಸಾಬ್ ನ ಮೊದಲನೇ ಹೆಂಡತಿ ಚಾಸಾ-**2** ರವರು ಕ್ವಾರ್ಟರ್ಸ್ ನಲ್ಲಿ ಬಂದು ವಾಸವಾಗಿರುವುದಿಲ್ಲ ಹಾಗೂ ಅವರ ಪರಿಚಯ ನನಗೆ ಇಲ್ಲ. ಜಾಫರ್ ಸಾಬ್ ನ

ಮೇಲೆ ಜೀವನಾಂಶ ಕೇಸ್ ಇರುತ್ತದೆ ಎಂದು ಆತನು ಹೇಳಿದ್ದರಿಂದ ಗೊತ್ತು, ಆತನ ಮೇಲೆ ಬೇರೆ ಯಾವ ಕೇಸುಗಳು ಇರುತ್ತವೆ ಎಂದು ನನಗೆ ಗೊತ್ತಿಲ್ಲ. ಜಾಫರ್ ಸಾಬ್ ನನ್ನ ಮುಂದೆ ಚಾಸಾ-2 ರವರ ವಿಷಯವಾಗಿ ಆರೋಪಿಯೂ ಜಗಳ ಮಾಡುತ್ತಾಳೆ ಎಂದು ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಮು.ಮಾ-3 ರಿಂದ 14 ನ್ನು ಜಪ್ತಿಗೊಳಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಹೇಳಿಕೆ ಕೊಟ್ಟಿಲ್ಲ ಮೃತನು ಪೊಲೀಸ್ ಅಧಿಕಾರಿ ಆಗಿದ್ದರಿಂದ ಹಾಗೂ ನಾನು ಪೊಲೀಸ್ ಆಗಿರುವುದರಿಂದ ಆರೋಪಿಯ ವಿರುದ್ಧ ದುರುದ್ದೇಶ ಪೂರಕವಾಗಿ ಆರೋಪಿ ಯಾವುದೇ ಘಟನೆ ಮಾಡದೆ ಇದ್ದರೂ ಸಹ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಿಪಿ-2 ಕ್ಕೆ ನಾನು ಠಾಣೆಯಲ್ಲಿ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈ ಪ್ರಕರಣಕ್ಕೆ ಅನುಕೂಲವಾಗುವಂತೆ ನಿಪಿ-3 ರಿಂದ 14 ನ್ನು ಸೃಷ್ಟಿ ಮಾಡಿ ಕೊಟ್ಟಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೆ. ಸರಿ ಇದೆ.

2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬಳ್ಳಾರಿ.